## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೇಶಲ ಕೇಸ ನಂಃ 78/2025
ಪಿಡಬ್ಲು :3 ಸಿಡಬ್ಲು :5

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಲಕ್ಷ್ಮೀ ಪೂಜಾರಿ |
| ತಂದೆಯ ಹೆಸರು | : ಶ್ರೀ ಬೀರಪ್ಪ ಪೂಜಾರಿ. |
| ವಯಸ್ಸು | : 32 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಬಡಚಿ, ಅಥಣಿ ತಾಲೂಕ |
| ದಿನಾಂಕ | : 23-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ಶ್ರಿಶೈಲ ನನ್ನ ಮೈದುನ. ಚಾಸಾ-4 ದುಂಡವ್ವ ನನ್ನ ಅತ್ತೆ, ಚಾಸಾ-7 ಬಾಳಪ್ಪ ನನ್ನ ಮಾವ, ಚಾಸಾ-8 ರಾಜಶ್ರೀ ಮೈದುನನ ಹೆಂಡತಿ. ಘಟನೆಗೆ ಸಂಬಂಧಿಸಿದಂತೆ ನನ್ನ ಮೈದುನ ದೂರು ಕೊಟಟಿದ್ದಾನೆ.

2. ದಿನಾಂಕಃ 31-08-2020 ರಂದು ನನ್ನ ಅತ್ತೆ ದನ ಕಾಯಲು ಸ್ಮಶಾನದ ಭೂಮಿಗೆ ಹೋಗಿದ್ದರು. ನಮ್ಮ ಅತ್ತೆಗೆ ಚಿಕ್ಕಯ್ಯ ಅವರು ನಮ್ಮ ಹೊಲದಲ್ಲಿ ದನಗಳನ್ನು ಏಕೆ ಬಿಟ್ಟಿದ್ದಿರಿ ಎಂದು ಕೇಳಿದಕ್ಕೆ, ಸ್ಮಶಾನ ಭೂಮಿಯಲ್ಲಿ ಬಿಟ್ಟದ್ದೇನೆ ನಿಮ್ಮ ಭೂಮಿಯಲ್ಲಿ ಬಿಟ್ಟಿದ್ದೇನೆ ಎಂದು ಹೇಳಿದ್ದಕ್ಕೆ ಚಿಕ್ಕಯ ನನ್ನ ಅತ್ತಗೆ ಅವಾಚ್ಯವಾಗಿ ಬೈದನು ಎಂದು ಮತ್ತು ಬಲಗಾಲಿಗೆ ಹೊಡೆದನು ಎಂದು ನನ್ನ ಅತ್ತೆ ಹೇಳಿದರು. ನನ್ನ ಮೈದುನ ಶ್ರೀಶೈಲ ಮತ್ತು

ಮಾವ ಹೋಗಿ ಜಗಳ ಬಿಡಿಸಿದ್ದಾರೆ.

3. ಅದೇ ದಿನ ಸಂಜೆ 6.00 ಗಂಟೆ ನಮ್ಮ ಅತ್ತೆ ದೇಸಾಯಿ ಅವರ ಹಾದಿಯಲ್ಲಿ ದನಗಳನ್ನು ಹೊಡೆದುಕೊಂಡು ನಮ್ಮ ಮನೆಗೆ ಬರುವಾಗ ಚಿಕ್ಕಯ್ಯ ಮತ್ತು ಪಾರ್ವತಿ ಅವರು ನಮ್ಮ ಅತ್ತೆಯನ್ನು ಅಡ್ಡಗಟ್ಟಿ ನಿಲ್ಲಿಸಿ ಪಾರ್ವತಿ ಅವರು ಮಧ್ಯಾಹ್ನ ನನ್ನ ಮಗನೊಂದಿಗೆ ಏಕೆ ಜಗಳ ಮಾಡಿದ್ದಿರಾ ಎಂದು ಕೇಳಿ ಕೂದಲು ಹಿಡಿದು ಜಗ್ಗಾಡಿ ಸೀರೆ ಹಿಡಿದು ಎಳೆದಾಡಿ ಹೊಡೆದರು ಎಂದು ನನ್ನ ಅತ್ತೆ ಮನೆಗೆ ಬಂದು ಹೇಳಿದರು. ನಾನು, ರಾಜಶ್ರೀ, ದೊಡ್ಡವ್ವ ಮತ್ತು ಮಲ್ಲವ್ವ ನನ್ನ ಅತ್ತೆಗೆ ಏಕೆ ಹೊಡೆದಿದ್ದಿರಿ ಎಂದು ಕೇಳಲು ಆರೋಪಿತರ ಮನೆಗೆ ಹೋದೆವು, ಆಗ ಆರೋಪಿತರು ನಮಗೂ ಹೊಡೆದರು ನಮ್ಮ ಬಟ್ಟೆಗಳನ್ನು ಹಿಡಿದು ಎಳೆದಾಡಿದರು. ನನ್ನ ಮೈದುನನಾದ ಶ್ರೀಶೈಲ ಪೂಜಾರಿ ಮತ್ತು ಮಹಾದೇವ ಪೂಜಾರಿ ಬಂದು ಬಿಡಿಸಿದರು. ನನಗೆ ಹೆಚ್ಚು ಗಾಯ ಆಗಿರಲಿಲ್ಲ ಆ ಕಾರಣ ನಾನು ಆಸ್ಪತ್ರೆಗೆ ಹೋಗಿ ತೋರಿಕೊಂಡಿರುವುದಿಲ್ಲ. ನನ್ನ ಅತ್ತೆಗೆ ಹೆಚ್ಚು ಗಾಯ ಆಗಿದ್ದರಿಂದ ಅವರು ಆಸ್ಪತ್ರೆಗೆ ಹೋಗಿ ತೂರಿಸಿಕೊಂಡಿರದ್ದಾರೆ. ಘಟನೆಯಾದ 4−5 ದಿನಗಳ ನಂತರ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಘಟನೆ ಬಗ್ಗೆ ನನ್ನ ಮೈದುನ ದೂರು ಕೊಟ್ಟಿದ್ದಾನೆ.

**ಪಾಟೀ ಸವಾಲು: ಆರೋಪಿತನ ಪರ ಶ್ರೀ.ಎಮ.ಜಿ.ಎಲ್ ವಕೀಲರಿಂದ**

4. ನಾನು ನನ್ನ ಮೈದುನರು, ಅವರ ಕುಟುಂಬದವರು ಎಲ್ಲರೂ ಒಟ್ಟಿಗೆ ವಾಸ ಇದ್ದೇವೆ. ಆರೋಪಿತರ ನಮ್ಮ ವಿರಧ್ಧ ದೂರು ನೀಡಿದ್ದಾರೆ ಎನ್ನುವುದು ಸರಿ. ಯಾವ ದೂರು ನೀಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಚಿಕ್ಕಯ್ಯ ನಮ್ಮ ಅತ್ತೆಗೆ ಹೊಡೆದಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಮೇಲೆ ದೂರು ಕೊಟ್ಟ ಕಾರಣ ಸೇಡಿನಿಂದ ನಾವು ಅವರ ಮೇಲೆ ದೂರು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಅತ್ತೆಯ ಮೇಲೆ ಹಲ್ಲೆ ಮಾಡದೆ ಇದ್ದರು ಸಹ ಸುಳ್ಳು ನೆಪ ಮಾಡಿಕೊಡು ನಮ್ಮ ಅತ್ತೆ ಆಸ್ಪತ್ರೆಗೆ

ಹೋಗಿದ್ದರು ಎನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಮೇಲೆ ದೂರು ಕೊಟ್ಟಿರುವ ಕಾರಣ ನಾವು ಅವರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ. ನಾವು ಆರೋಪಿತರ ಮೇಲೆ ಹಲ್ಲೆ ಮಾಡಿ ಅದರಿಂದ ತಪ್ಪಿಸಿಕೊಳ್ಳಲು ನಾವು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ ಎನ್ನುವುದು ಸರಿಯಲ್ಲ.

5. ನಮ್ಮ ಅತ್ತೆ ಬಲಗಾಲಿಗೆ ಪೆಟ್ಟು ಆಗಿದ್ದನ್ನು ನಾನು ನೋಡಿದ್ದೇನೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.